2. ದಿನಾಂಕ: 16.2.2003 ಬಾನುವಾರ ಸಂಜೆ 4.30 ಗಂಟೆಗೆ ಘಟನೆ ನಡೆದಿರುತ್ತದೆ. ಈ ಬಗ್ಗೆ ಲಕ್ಷ್ಮೇಪುರಂ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ತನಿಖೆ ನಡೆಸಲಾಗುತ್ತಿದೆ.

3. ಜಿಲ್ಲಾ ಪಂಚಾಯತ್ ಲೆಕ್ಕಗಳಿಗೆ ಸಂಬಂಧಿಸಿದ ವೋಚರ್‌ಗಳು, ಕೆಲವು ಎನ್‌ಡಿಸಿ ಬಿಲ್ಲುಗಳು, ಹಳೆಯ ಕೆಲವು ಆಡಿಟ್ ರಿಪೋರ್ಟ್‌ಗಳು ಮತ್ತು ಏಳು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ವೋಚರ್‌ಗಳು, ಯೋಜನಾ ಶಾಖೆಯ ಪ್ರಾದೇಶಿಕ ಯೋಜನಾಧಿಕಾರಿಗಳ ಕೊಠಡಿಯಲ್ಲಿನ ಸ್ಟೀಲ್ ಅಲ್ಮೇರಾದಲ್ಲಿದ್ದ ಕಡತಗಳು ಹಾಗೂ ಮೇಜಿನ ಮೇಲಿದ್ದ ಕೆಲವು ದಾಖಲಾತಿಗಳು ಸುಟ್ಟುಹೋಗಿರುತ್ತವೆ, ಸುಮಾರು ರೂ. 20,100,00 ಗಳ ಅಂದಾಜಿನ ಹಳೆಯ ಪೀಠೋಪಕರಣಗಳು ಸುಟ್ಟುಹೋಗಿವೆ.

4. ಪೋಲೀಸ್ ವರದಿ ಬಂದ ನಂತರ ನಿಜಾಂಶ ಹೊರಬೀಳುತ್ತದೆ.

ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅವ್ಯವಹಾರಗಳು

1523(2861) ಶ್ರೀ ರಾಮದಾಸ್. ಎ (ಕೃಷ್ಣರಾಜ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಒಟ್ಟು ಎಷ್ಟು ಜನ ಸಿ ಇ ಟಿ (ಸಾಮಾನ್ಯ ಪ್ರವೇಶ ಪರೀಕ್ಷೆಗೆ) ಗೆ ಹಾಜರಾಗಿದ್ದರು; (ರಾಜ್ಯ, ಹೊರ ರಾಜ್ಯ ಹೊರದೇಶದ ವಿದ್ಯಾರ್ಥಿಗಳ ಪ್ರತ್ಯೇಕ ವಿವರಗಳನ್ನು ನೀಡುವುದು);

2. ಸಿ.ಇ.ಟಿ ಗೆ ಹಾಜರಾಗಿದ್ದವರ ಪೈಕಿ ಒಟ್ಟು ಎಷ್ಟು ಜನ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ;

3. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅವ್ಯವಹಾರಗಳು ನಡೆದಿರುವುದು ನಿಜವೇ; (ಈ ಬಗ್ಗೆ ವಿವರ ನೀಡುವುದು);

4. ಅವ್ಯವಹಾರ ಆರೋಪದ ಮೇಲೆ ಎಷ್ಟು ಜನ ವಿದ್ಯಾರ್ಥಿಗಳ ಪ್ರವೇಶ ರದ್ದುಗೊಳಿಸಲಾಗಿದೆ; ಅವ್ಯವಹಾರಕ್ಕೆ ಕಾರಣಕರ್ತರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

5. ಸಿ.ಇ.ಟಿ ತರಬೇತಿ ಕೇಂದ್ರ ಸ್ಥಾಪಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ. ಪ್ರಸಕ್ತ 2002-2003ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 130926 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಹಾಜರಾದರು. ಅದರಲ್ಲಿ ಕರ್ನಾಟಕ ವಿದ್ಯಾರ್ಥಿಗಳು 72117 ಹೊರರಾಜ್ಯದ ವಿದ್ಯಾರ್ಥಿಗಳು 58754 ಮತ್ತು ಹೊರ ದೇಶದ ವಿದ್ಯಾರ್ಥಿಗಳು 55.

2. ಸಿಇಟಿ ಗೆ ಹಾಜರಾಗಿದ್ದವರ ಪೈಕಿ ಈವರೆಗೆ ಒಟ್ಟು 29939 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಇದರಲ್ಲಿ ವೈದ್ಯಕೀಯ ಕೋರ್ಸಿಗೆ 2452 ದಂತ ವೈದ್ಯಕೀಯ 1590 ಮತ್ತು ಇಂಜಿನಿಯರಿಂಗ್ ಕೋರ್ಸ್‌ಗೆ 25897 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.

3. ಸಾಮಾನ್ಯ ಪ್ರವೇಶ ಪರೀಕ್ಷೆಯ ನಂತರ ರ್‍ಯಾಂಕ್ ನೀಡುವಾಗ ಗಣಕಯಂತ್ರದಲ್ಲಿ ಹೆಚ್ಚಿನ ಅಂಕಗಳಿಗೆ ತಿದ್ದುಪಡಿ ಮಾಡಿ 26 ಹೊರರಾಜ್ಯದ ಅಭ್ಯರ್ಥಿಗಳಿಗೆ ರ್‍ಯಾಂಕ್‌ನ್ನು ಕೊಟ್ಟಿದ್ದು, ಇದರ ಬಗ್ಗೆ ಸುಳಿವು ಸಿಕ್ಕ ನಂತರ ಆ 26 ವಿದ್ಯಾರ್ಥಿಗಳ ಪ್ರವೇಶವನ್ನು ರದ್ದುಪಡಿಸಿ ಹೊರರಾಜ್ಯದ 26 ಮೆರಿಟ್ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿಕೊಡಲಾಗಿದೆ.

4. 26 ಹೊರ ರಾಜ್ಯದ ವಿದ್ಯಾರ್ಥಿಗಳ ಪ್ರವೇಶ ರದ್ದುಗೊಳಿಸಲಾಗಿದೆ. ಇದರಿಂದ ಪ್ರವೇಶ ರದ್ದಾದ ವಿದ್ಯಾರ್ಥಿಗಳು ಹೈಕೋರ್ಟ್‌ಗೆ ಕೇಸನ್ನು ದಾಖಲಿಸಿದ್ದರು. ಸದರಿ ಕೇಸು ವಜಾ ಆಗಿ ಸಿಇಟಿ ಪರವಾಗಿ ತೀರ್ಪನ್ನು ಕೊಡಲಾಗಿದೆ ಮತ್ತು ತಪ್ಪಿತಸ್ಥರ ವಿರುದ್ಧ ಸಿಓಡಿ ಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ.

5. ಇಲ್ಲ

ದಾವಣಗೆರೆ ನಗರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

1525 (1552) ಶ್ರೀ ರವೀಂದ್ರನಾಥ ಎಸ್.ಎ (ಮಾಯಕೊಂಡ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ದಾವಣಗೆರೆ ನಗರಕ್ಕೆ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿದೆಯೇ?

ಆ. ಸದರಿ ಕಾಲೇಜಿಗೆ ಸ್ವಂತ ಕಟ್ಟಡವಿದೆಯೇ?

ಇ. ಇಲ್ಲದಿದ್ದಲ್ಲಿ ಯಾವಾಗ ಕಟ್ಟಡ ನಿರ್ಮಾಣ ಪ್ರಾರಂಭಿಸಲಾಗುವುದು, ಯಾವ ಸ್ಥಳದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಇದರ ಯೋಜನಾ ವೆಚ್ಚವೆಷ್ಟು? (ವಿವರ ಒದಗಿಸುವುದು)

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ. ಹೌದು

ಆ. ಇಲ್ಲ

ಇ. ತಾಂತ್ರಿಕ ಶಿಕ್ಷಣ ಇಲಾಖೆಗೆ ಸೇರಿದ ದಾವಣಗೆರೆ ಸರ್ಕಾರಿ ಪಾಲಿಟೆಕ್ನಿಕ್ ಮಹಿಳಾ ವಿದ್ಯಾರ್ಥಿನಿಲಯದ ಪಕ್ಕದಲ್ಲಿರುವ 2.00 ಎಕರೆ ನಿವೇಶನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ ಕಾಲೇಜು ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿಕೊಳ್ಳಲಾಗುತ್ತಿದೆ. ಸದರಿ ಜಾಗದಲ್ಲಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಹುಡ್ಕೋ ನೆರವಿನ ಯೋಜನೆಯಡಿಯಲ್ಲಿ ರೂ. 98. ಲಕ್ಷಗಳನ್ನು ಹಂಚಿಕೆ ಮಾಡಿಕೊಳ್ಳಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ಇಂಜಿನಿಯರ್ ಹುದ್ದೆಗಳ ಭರ್ತಿ

1526(1870) ಶ್ರೀ ಸಭಾಪತಿ. ಯು.ಆರ್. (ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ವಿವಿಧ ಜಿಲ್ಲಾ ಪಂಚಾಯತ್‌ಗಳ ಇಂಜಿನಿಯರಿಂಗ್ ವಿಭಾಗದಲ್ಲಿ ಖಾಲಿ ಇರುವ ಸಹಾಯಕ, ಸಹಾಯಕ ಕಾರ್ಯನಿರ್ವಾಹಕ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2. ಈ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1. 64 ಹುದ್ದೆಗಳು (ವಿವರಗಳನ್ನು ಲಗತ್ತಿಸಿರುವ ಅನುಬಂಧ - 1ರಲ್ಲಿ ಒದಗಿಸಿದೆ).

2. ಬ್ಯಾಕ್‌ಲ್ಯಾಗ್ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅದರಂತೆ ಸಹಾಯಕ ಇಂಜಿನಿಯರ್‌ರ ಹುದ್ದೆಗಳನ್ನು ಸರ್ಕಾರವು ಭರ್ತಿ ಮಾಡಲು ಕ್ರಮ ಕೈಗೊಳ್ಳುತ್ತಿದೆ.